**ಓ.ಎಸ್. ನಂಬರ್ಃ 28/2021** **ಪಿ ಡಬ್ಲೂಃ 2**

<u>ದಿಃ 10-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.
<u>**ಪಾಟೀಸವಾಲು:-**</u> ಪ್ರತಿವಾದಿಪರ ವಕೀಲರಿಂದಃ-

1 ನೇ ಪ್ರತಿವಾದಿ ಇವರ ಗಂಡನ ಹೆಸರು ಭೀಮಪ್ಪ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೆ ನಂ. 37 ಇರುತ್ತದೆ. ದಾವಾ ಸ್ವತ್ತಿನಿಂದ 1 ನೇ ಪ್ರತಿವಾದಿರವರ ಗಂಡ ಭೀಮಪ್ಪ ಇವರು 1 ಎಕರೆ ಜಮೀನು ವಾದಿಗಳಿಗೆ ಮಾರಾಟ ಮಾಡಿದರು ಎಂದರೆ ಸರಿ. ಅದರಂತೆ ಮುಟೇಶನ ಆಗಿದೆ ಎಂದರೆ ಸರಿ. ಸದರಿ ಭೀಮಪ್ಪ ದಾವಾ ಸ್ವತ್ತಿನಲ್ಲಿ 1 ಎಕೆರ ಜಮೀನು ಹೊರತುಪಡಿಸಿ ಬೇರೆ ಜಮೀನು ಮಾರಾಟ ಮಾಡಿಲ್ಲ ಎಂದರೆ ಸಾಕ್ಷಿಯು ತದನಂತರ 11 ಗುಂಟೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. 1 ಎಕರೆ ಮಾರಾಟದ 1 ವರ್ಷಗಳ ನಂತರ 11 ಗುಂಟೆ ಮಾರಾಟ ಮಾಡಿದ್ದಾರೆ. ಅದರಂತೆ ಮುಟೇಶನ ಆಗಿದೆ ಅಥವಾ ಇಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ಆಗಿದೆ ಎಂದು ನುಡಿಯುತ್ತಾರೆ. ಭೀಮಪ್ಪ ಇವರು ಸದರಿ 11 ಗಂಟೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಭೀಮಪ್ಪ ಇತನು ಒಂದು ವೇಳೆ 11 ಗುಂಟ ಖರೀದಿದಾರರಿಗೆ ಮುಟೇಶನ ಮಾಡಿಕೊಟ್ಟಿದ್ದಲ್ಲಿ ಅವರು ನ್ಯಾಯಾಲಯಕ್ಕೆ ಬಂದು ದಾವೆ ಸಲ್ಲಿಸಬಹುದು ಅಂತಾ ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಭೀಮಪ್ಪ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಭೀಮಪ್ಪ ಸಾಯುವ ತನಕ ಯಾವುದೇ ಮುಟೇಶನ ಮಾಡಿಕೊಟ್ಟಿಲ್ಲ ವಾದಿಯವರು ಅವರ ಮರಣೋತರ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**